## ಬೆಂಗಳೂರು ಜಗತ್ತಿನ ಅತ್ಯಂತ ಕ್ರಿಯಾಶೀಲ ನಗರ

**ಮೆಟ್ರೋ ಜಾಲದಿಂದ ಸಾರಿಗೆ ಕ್ರಾಂತಿ:** ದೇಶದಲ್ಲಿಯೇ ಎರಡನೇ ಅತಿ ಉದ್ದದ 42.3 ಕಿ.ಮೀ. ಮೆಟ್ರೋ ರೈಲು ಜಾಲ ರಾಷ್ಟ್ರಕ್ಕೆ ಸಮರ್ಪಣೆ. ಎರಡನೇ ಹಂತದಲ್ಲಿ ರೂ.26,405 ಕೋಟಿ ವೆಚ್ಚದಲ್ಲಿ 72 ಕಿ.ಮೀ ಮೆಟ್ರೋ ಜಾಲದ ವಿಸ್ತರಣೆ ಕಾರ್ಯ ಪ್ರಗತಿಯಲ್ಲಿ.

**ಹಸಿವು ನೀಗಿಸಿದ ಇಂದಿರಾ ಕ್ಯಾಂಟೀನ್:** ಬೆಂಗಳೂರು ನಗರದ ಬಡವರು, ಶ್ರಮಿಕರು ಹಾಗೂ ಬಡವಲಸಿಗರ ಹಸಿವನ್ನು ನೀಗಿಸುವ ಉದ್ದೇಶದಿಂದ ವಾರ್ಡ್‌ಗೆ ಒಂದರಂತೆ ಇಂದಿರಾ ಕ್ಯಾಂಟೀನ್‌ಗಳ ಸ್ಥಾಪನೆ. ಪ್ರಸಕ್ತ 125 ಇಂದಿರಾ ಕ್ಯಾಂಟೀನ್‌ಗಳು ಲೋಕಾರ್ಪಣೆಗೊಂಡಿದ್ದು ಉಳಿದ ಕ್ಯಾಂಟೀನ್‌ಗಳಿಗೆ ಶೀಘ್ರದಲ್ಲಿಯೇ ಚಾಲನೆ. ತಿಂಡಿಗೆ 5 ರೂಪಾಯಿ, ಊಟಕ್ಕೆ 10 ರೂಪಾಯಿ ದರ ನಿಗದಿ.

**ಮೂಲಸೌಕರ್ಯಕ್ಕೆ ಅವಿರತ ಕೊಡುಗೆ:** ಬೆಂಗಳೂರಿನಲ್ಲಿ ರೂ.690 ಕೋಟಿ ವೆಚ್ಚದಲ್ಲಿ ಸುಮಾರು 80 ಕಿ.ಮೀ ಉದ್ದದ ಆಯ್ದ 43 ಪ್ರಮುಖ ರಸ್ತೆಗಳ ಅಭಿವೃದ್ಧಿಪಡಿಸಿ ಪಾದಚಾರಿ ಸೌಲಭ್ಯಗಳು ಮೇಲ್ದರ್ಜೆಗೆ. 200 ಕಿ.ಮೀ ಉದ್ದದ ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ ರೂ.200 ಕೋಟಿ

**ಉತ್ಕೃಷ್ಟ ಟೆಂಡರ್‌ಶ್ಯೂರ್ ರಸ್ತೆಗಳು:** ಬೆಂಗಳೂರು ಕೇಂದ್ರ ವಾಣಿಜ್ಯ ವಲಯದಲ್ಲಿ 12 ಕಿ.ಮೀ. ಟೆಂಡರ್‌ಶ್ಯೂರ್ ರಸ್ತೆ ಅಭಿವೃದ್ಧಿ. 3ನೇ ಹಂತದ ಟೆಂಡರ್‌ಶ್ಯೂರ್ ಮಾದರಿಯಡಿ 25 ಕಿ.ಮೀ ಉದ್ದದ 25ಅಂತರ ಸಂಪರ್ಕ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಲು ರೂ.250 ಕೋಟಿ ನೀಡಿಕೆ.

**ತಡೆ ರಹಿತ ಸಂಚಾರಕ್ಕೆ ಆದ್ಯತೆ:** ಬೆಂಗಳೂರಿನಲ್ಲಿ ತಡೆರಹಿತ ವಾಹನ ಸಂಚಾರಕ್ಕಾಗಿ ಆಯ್ದ 9 ವಾಹನ ದಟ್ಟಣೆ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್‌ಗಳ ನಿರ್ಮಾಣಕ್ಕೆ ರೂ.421 ಕೋಟಿ ನೀಡಿಕೆ.

ಭಾರತ ಹಳ್ಳಿಗಳ ದೇಶ. ರಾಜ್ಯದ ಶೇ.62ರಷ್ಟು ಜನ ಈಗಲೂ ವಾಸಿಸುತ್ತಿರುವುದು ಗ್ರಾಮೀಣ ಪ್ರದೇಶದಲ್ಲಿ. ಹೀಗಾಗಿ ಗ್ರಾಮೀಣ ಪ್ರದೇಶ ಅಭಿವೃದ್ಧಿ ಎಂದರೆ ದೇಶದ ಸರ್ವತೋಮುಖ ಅಭಿವೃದ್ಧಿ ಎಂದರೆ ಅತಿಶಯೋಕ್ತಿಯಲ್ಲ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಹೆಚ್ಚು ಆಸ್ಥೆ ವಹಿಸಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವಿಕೇಂದ್ರೀಕರಣ, ನೈರ್ಮಲ್ಯ, ವಿದ್ಯುದೀಕರಣ, ಇ– ಆಡಳಿತ, ರಸ್ತೆಗಳ ನಿರ್ಮಾಣ, ಕುಡಿಯುವ ನೀರು, ತಾಂಡಾ, ಹಟ್ಟಿ, ಹಾಡಿ ಮತ್ತಿತರ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವುದು. ಹೀಗೆ ಹಲವಾರು ಕಾರ್ಯಕ್ರಮ, ಯೋಜನೆಗಳನ್ನು ರೂಪಿಸಿದೆ.

### ಹೊಸ ಪಂಚಾಯತಿಗಳ ರಚನೆ

ಅಧಿಕಾರ ವಿಕೇಂದ್ರೀಕರಣ ಮತ್ತು ಜನರ ಬಳಿಗೆ ಆಡಳಿತವನ್ನು ಕೊಂಡೊಯ್ಯಬೇಕೆಂಬುದು ಕರ್ನಾಟಕ ಸರ್ಕಾರದ ಬಯಕೆ. ಈ ಹಿನ್ನೆಲೆಯಲ್ಲಿ 460 ಹೊಸ ಗ್ರಾಮ ಪಂಚಾಯಿತಿಗಳನ್ನು ರಚಿಸಲಾಗಿದೆ. 4,023 ಬಾಪೂಜಿ ಸೇವಾ ಕೇಂದ್ರಗಳನ್ನು ರಚಿಸಲಾಗಿದ್ದು, ಲಕ್ಷಾಂತರ ಗ್ರಾಮೀಣ ಜನ ಸರ್ಕಾರದ ವಿವಿಧ ಸೇವೆಗಳನ್ನು ಒಂದೇ ಸೂರಿನಡಿ ಪಡೆಯುತ್ತಿದ್ದಾರೆ. ಜೊತೆಗೆ ವಿಕೇಂದ್ರೀಕರಣವನ್ನು ಸಶಕ್ತಗೊಳಿಸಲು ಗ್ರಾಮ ಸ್ವರಾಜ್ ಮತ್ತು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ– 2015 ಅನ್ನು ಜಾರಿಗೆ ತರಲಾಗಿದೆ.

### ಶುದ್ಧ ಕುಡಿಯುವ ನೀರು

ಗ್ರಾಮೀಣ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಬೇಕೆಂಬುದು ಕರ್ನಾಟಕ ಸರ್ಕಾರದ ಪರಮೋಚ್ಚ ಗುರಿ. ಈ ಹಿನ್ನೆಲೆಯಲ್ಲಿ 10,500 ಶುದ್ಧ ಕುಡಿವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ. ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು 1.6 ಕೋಟಿಗೂ ಹೆಚ್ಚು ಜನ ಪಡೆಯುತ್ತಿದ್ದಾರೆ. ಆರೋಗ್ಯಪೂರ್ಣ ಕರ್ನಾಟಕವನ್ನು ರೂಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಬಹುದೊಡ್ಡ ಹೆಜ್ಜೆ ಇದು.

ರೂ.1,554 ಕೋಟಿ ವೆಚ್ಚದಲ್ಲಿ 190 ಬಹುಗ್ರಾಮ ಕುಡಿವ ನೀರಿನ ಯೋಜನೆ ಅನುಷ್ಠಾನದ ಮೂಲಕ ರಾಜ್ಯದಲ್ಲಿ 2,539 ಗ್ರಾಮಗಳಿಗೆ ಶಾಶ್ವತ ಕುಡಿವ ನೀರಿನ ವ್ಯವಸ್ಥೆ ಮಾಡಲಾಗಿದೆ.

### ಬಯಲು ಶೌಚಮುಕ್ತ

ಬಯಲು ಶೌಚಮುಕ್ತ ರಾಜ್ಯವನ್ನಾಗಿ ಮಾಡಲು ಕರ್ನಾಟಕ ಸರ್ಕಾರ ಅವಿರತ ಶ್ರಮಿಸುತ್ತಿದೆ. ಇದಕ್ಕಾಗಿ 'ಶೌಚಾಲಯಕ್ಕೆ ಸಮರ' ಎಂಬ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ರಾಜ್ಯದಲ್ಲಿ 31.61 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ರಾಜ್ಯದಲ್ಲಿ ಶೌಚಾಲಯ ಹೊಂದಿರುವ ಕುಟುಂಬಗಳ ಪ್ರಮಾಣ ಶೇ.35.41ರಿಂದ ಶೇ.70ಕ್ಕೆ ಏರಿಕೆ ಕಂಡಿದೆ. 10,464 ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲಾಗಿದೆ.

### ಉದ್ಯೋಗ ಖಾತರಿ

ರಾಜ್ಯದಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. 52.7 ಲಕ್ಷ ಕುಟುಂಬಗಳಿಗೆ ಉದ್ಯೋಗ ಚೀಟಿಗಳನ್ನು ನೀಡಲಾಗಿದೆ. ನಾಲ್ಕು ವರ್ಷಗಳ ಅವಧಿಯಲ್ಲಿ 7,056 ಕೋಟಿ ರೂ. ವೆಚ್ಚ ಮಾಡಿದ್ದು 24.8 ಕೋಟಿ ಮಾನವ ದಿನಗಳನ್ನು ಸೃಜಿಸಲಾಗಿದೆ.

ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದಲ್ಲಿ 11.89 ಲಕ್ಷ ಆಸ್ತಿ ಸೃಜನೆ ಮಾಡಲಾಗಿದೆ. 'ನಮ್ಮ ಹೊಲ ನಮ್ಮ ದಾರಿ' ಯೋಜನೆಯಡಿ 5,000 ಕಿ.ಮೀ ಉದ್ದದ ಮಣ್ಣಿನ ರಸ್ತೆ ನಿರ್ಮಾಣ ಮಾಡಿದೆ. 'ನಮ್ಮ ಗ್ರಾಮ ನಮ್ಮ ರಸ್ತೆ' ಯೋಜನೆಯಡಿ 9,583 ಕಿ.ಮೀ ರಸ್ತೆಗಳನ್ನು ನಿರ್ಮಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿನ ರಸ್ತೆಗಳ ಅಭಿವೃದ್ಧಿಗೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಶಾಸಕರ ಅಧ್ಯಕ್ಷತೆಯ ಟಾಸ್ಕ್‌ಫೋರ್ಸ್ ಸಮಿತಿ ಮೂಲಕ ರಸ್ತೆಗಳ ನಿರ್ವಹಣೆಗೆ 589 ಕೋಟಿ ರೂ. ಅನುದಾನ ನೀಡಲಾಗಿದೆ.

'ಸುವರ್ಣ ಗ್ರಾಮ' ಯೋಜನೆಯಡಿ ಬಾಕಿ ಇದ್ದ 1,300 ಗ್ರಾಮಗಳನ್ನು ರೂ. 946 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿದ್ದರೆ, ಗ್ರಾಮ ವಿಕಾಸ ಯೋಜನೆಯಡಿ 700 ಗ್ರಾಮಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

